ಡಗಳು ಇತ್ಯಾದಿಗಳಿಗೆ ದೊರೆಯದೆ, ಕೇವಲ ದೊಡ್ಡ ದೊಡ್ಡ ಸಿನಿಮಾ ಇತ್ಯಾದಿಗಳಿಗೆ ದೊರೆಯುತ್ತಿದೆ. ಅಂಥಾವುಗಳಿಗೆ ಮಾತ್ರ ಈ ವಸ್ತುಗಳು ಎಲ್ಲಿಂದ ಬರುತ್ತವೆಂಬುದನ್ನು ಸರ್ಕಾರದವರು ತಿಳಿಸುವುದಕ್ಕಾಗುತ್ತದೆಯೇ ?

Mr. SPEAKER.—That does not arise out of this question.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು (ಚಿಕ್ಕಮಗಳೂರು—ನಿಮ್ಮ ಪಂಗಡ).—ಬೇಲೂರಿನಲ್ಲಿದ್ದ ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರವರನ್ನು ಕೆಲವು ದಿವಸಗಳ ಹಿಂದೆ ಬ್ಲಾಕ್ ಮಾರ್ಕೆಟ್ ಮಾಡಿದರೆಂಬ ಕಾರಣದ ಮೇಲೆ ಅವರನ್ನು ಸಸ್ಪೆಷನ್ನಿನಲ್ಲಿ ಇಡ ರಾಗಿತೆ ?

Sri T. MARIAPPA.—I want notice.

ಶ್ರೀ ಎಂ. ಗೋವಿಂದ ರೆಡ್ಡಿಯವರು.—ವ್ಯವಸಾಯದ ಇಲಾಖೆಯ ಇನ್‌ಸ್ಪೆಕ್ಟರು ಸಹ ಬ್ಲಾಕ್‌ಮಾರ್ಕೆಟ್ ಮಾಡಬಹುದೇ ?

ಶ್ರೀ ಟಿ. ಮರಿಯಪ್ಪನವರು.—ಬ್ಲಾಕ್‌ಮಾರ್ಕೆಟ್ಟನ್ನು ಯಾರೂ ಮಾಡಬಾರದು.

ಶ್ರೀ ಎಲ್. ಎಚ್. ತಿಮ್ಮಬೋಯಿಯವರು.—ಆಪಾದಿತರ ವಿಚಾರಣೆ ನಡೆದು ಅವರು ಆಪಾದಿತರಲ್ಲವೆಂದು ತೀರ್ಮಾನವಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಮರಿಯಪ್ಪನವರು.—ಇಂಥಾ ಸಂದರ್ಭದಲ್ಲಿ ಹೀಗೇ ಆಗಿದೆಯೆಂಬುದನ್ನು ಹೇಳುವುದಕ್ಕಾಗುವುದಿಲ್ಲ. I want notice for that.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಹಾಗೆ ದಾಖಲಾಗಿರತಕ್ಕ ಕೇಸುಗಳಲ್ಲಿ ತೀರ್ಮಾನವಾಗಿರತಕ್ಕವು ಎಷ್ಟು ಮತ್ತು ತೀರ್ಮಾನವಾಗದೆ ಉಳಿದಿರತಕ್ಕವೆಷ್ಟೆಂಬುದನ್ನು ತಿಳಿಸಲಕ್ಕಾಗುತ್ತದೆಯೇ ? ಮತ್ತು ಈ ವಿಚಾರದಲ್ಲಿ ಸರ್ಕಾರದವರು ವರದಿಗಳನ್ನು ಅವರಿಂದ ಎಷ್ಟು ದಿವಸಗಳಿಗೊಂದಾವರ್ತಿ ತರಿಸಿಕೊಳ್ಳುತ್ತಿದ್ದಾರೆ ?

ಶ್ರೀ ಟಿ. ಮರಿಯಪ್ಪನವರು.—ಪೀರಿಯಾಡಿಕಲ್ ಆಗಿ ಬರುತ್ತಿದೆ.

ಶ್ರೀ ಟಿ. ಸಿ. ಹೊನ್ನಪ್ಪನವರು.—ವಾರಕ್ಕೊಂದಾವರ್ತಿ ತರಿಸಿಕೊಳ್ಳುತ್ತೀರೋ ಅಥವಾ ತಿಂಗಳಿಗೊಂದಾವರ್ತಿ ತರಿಸಿಕೊಳ್ಳುತ್ತೀರೋ ?

ಶ್ರೀ ಟಿ. ಮರಿಯಪ್ಪನವರು.—ತಿಂಗಳಿಗೊಂದಾವರ್ತಿ ಕೆಲವನ್ನೂ ಮತ್ತೆ ಕೆಲವನ್ನು ಪೀರಿಯಾಡಿಕಲ್ ಆಗಿಯೂ ತರಿಸಿಕೊಳ್ಳುತ್ತಿದ್ದೇವೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ಮ ಪಂಗಡ).—ಈ ಆಹಾರ ಸಾಮಗ್ರಿಗಳು ಮತ್ತು ಇತರ ಕೆಲವು ಕಂಟ್ರೋಲ್ ಸಾಮಾನುಗಳನ್ನು ಲಾರಿಗಳಲ್ಲಿ ಸಾಗಿಸುತ್ತಿರುವಾಗಲೇ ಅವು ಬ್ಲಾಕ್‌ಮಾರ್ಕೆಟ್ಟಿನಲ್ಲಿ ಮಾರಾಟವಾಗುತ್ತಿರುವುವು ಎಂದು ತಮ್ಮ ಗಮನಕ್ಕೆ ಬಂದಿದೆಯೇ ?

Sri T. MARIAPPA.—The question is vague.

ಶ್ರೀ ಟಿ. ಹನುಮಯ್ಯನವರು.—ನಾನು ಕೇಳುತ್ತಿರುವುದು ಖಾನಗೀ ಲಾರಿಗಳಲ್ಲಿ ನಡೆಯುತ್ತಿರುವ ವಿಚಾರ. ಅದು ತಮಗೆ ಗೊತ್ತಿದೆಯೇ ?

ಶ್ರೀ ಟಿ. ಮರಿಯಪ್ಪನವರು.—ನಾವು ಕೂಡ ಆಹಾರ ಸಾಮಗ್ರಿಗಳನ್ನು ಸಾಗಿಸಲು ಖಾನಗಿಯವರ ಲಾರಿಗಳನ್ನು ಉಪಯೋಗಿಸಿಕೊಳ್ಳುತ್ತಿದ್ದೇವೆ. ಆದ್ದರಿಂದ ನಾವು ಕೇಳತಕ್ಕ ವಿಚಾರ ನಿರ್ದಿಷ್ಟವಾಗಿಲ್ಲ.

Mr. SPEAKER.—Question No. 189. Janab Syed Abdur Rahman (Not present). Question No. 189 will be treated as an unstarred question.

Question No. 111. Sri K. Sampangi Ramiah. (Not present). Question No. 111 will be treated as an unstarred question.

Mr. SPEAKER. Sri T. Ramachar. Question No. 127.

Sri K. CHENGALARAYA REDDY (Leader of the House).—I submit that the question may be taken up a little later as the Minister concerned is not here now.

Mr. SPEAKER.—Yes. The question will be taken up afterwards.

Question No. 24. Sri M. Govinda Reddy.

Hospitals having no Doctors.

*Q.—24. Sri M. GOVINDA REDDY (Chitaldrug District—General).—

Will the Government be pleased to state :—

(*a*) the number of hospitals and L.F. dispensaries in the State ;

(*b*) the number of hospitals and L.F.dispensaries which had no doctors in them—

(i) for over six months in each year ;

(ii) for the whole year round each year ;

(iii) for two years and longer ?

A.—Sri T. SIDDALINGIAH (Minister for Education and Public Health).—

(*a*) The total number of hospitals and dispensaries working in the State is 470.

(*b*) The number of dispensaries which have no doctors is detailed below :—

1. For over 6 months	...	5
2. For over 1 year	...	16
3. For over 2 years	...	10

Visits by the nearest Sub-Assistant Surgeons have been arranged to all

these dispensaries and medical aid is being rendered to the sufferers.

Sri M GOVINDA REDDY.—What is the action taken by the Government for filling up vacancies in hospitals, which have remained without doctors for over six months, for over one whole year and for over two years ?

ಶ್ರೀ ಟಿ. ಸಿದ್ದಲಿಂಗಯ್ಯನವರು (ವಿದ್ಯಾ ಮತ್ತು ಆರೋಗ್ಯ ಮಂತ್ರಿಗಳು).—ಡಾಕ್ಟರುಗಳ ಸಂಖ್ಯೆ ಕಡಿಮೆಯಿರುವುದು ಗೊತ್ತಿದೆ. ಅವರನ್ನು ಆ ಸ್ಥಾನಕ್ಕೆ ಬರುವಂತೆ ಆಕರ್ಷಣೆ ಮಾಡಲು ಕೆಲವು ಹೆಚ್ಚಿನಸೌಲಭ್ಯಗಳನ್ನೂ ಮತ್ತು ರಿಯಾಯಿತಿಗಳನ್ನೂ ಕಲ್ಪಿಸಿದ್ದೇವೆ. ಕಾರ್ಜೀನಲ್ಲಿ ವ್ಯಾನಂಗಕ್ಕೆ ಬಂದು ಸೇರುವಾಗ ಇಷ್ಟು ದಿವನ ನಮ್ಮ ಸಂಸ್ಥಾನದಲ್ಲಿ ಕೆಲಸ ಮಾಡಲೇಬೇಕೆಂಬ ನಿರ್ಬಂಧ ಹಾಕಿದ್ದೇವೆ. ನಬ್ ಅಸಿಸ್ಟೆಂಟ್ ಸರ್ಜನ್ ದರ್ಜೆಯನ್ನು ಸಕೆಂಡ್ ಕ್ಲಾಸ್ ಅಸಿಸ್ಟೆಂಟ್ ಸರ್ಜನ್ ದರ್ಜೆಗೆ ಏರಿಸಲಾಗಿದೆ. ಇನ್ನೇನು ಅನುಕೂಲ ಕಲ್ಪಿಸಬಹುದೋ ಅದನ್ನೂ ಆಲೋಚನೆ ಮಾಡುತ್ತಿದ್ದೇವೆ.

Sri M. GOVINDA REDDY.— Is it not true that the Medical School in Bangalore and Medical College in Mysore are turning out hundreds of doctors every year ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಾನ್ಯ ಸದಸ್ಯರು ಕೊಟ್ಟಿರತಕ್ಕ ಪ್ರಶ್ನೆ ಅಷ್ಟು ಸರಿಯಾಗಿದ್ದಂತೆ ಕಾಣುತ್ತಿಲ್ಲ.

Sri M. GOVINDA REDDY.—Have the Government tried to provide doctors with attractive remuneration so that they may take up service in Mysore Government ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹುದ್ದೆಗಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು, ಸಾಧ್ಯವಾದ ಮಟ್ಟಿಗೂ ಅವರ ದರ್ಜೆ ಮತ್ತು ಸಂಬಳ ಸಾರಿಗೆಗಳನ್ನು ಏರಿಸಲಾಗುತ್ತದೆ. ಆ ಬಗ್ಗೆ ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದೇವೆ.

Sri M. GOVINDA REDDY.—Then am I to understand that the Government do not find enough doctors for the number of hospitals they have?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರು ಸಿಕ್ಕುತ್ತಿಲ್ಲವೆಂಬುದು 'It is a glaring fact'.

Sri M. GOVINDA REDDY.—Is the Hon'ble Minister aware that every year some hospital or the other is being opened afresh although the Minister knows that doctors are not available ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಪದ್ಧತಿ ಮೊದಲಿಂದಲೂ ಉಂಟು. ಯಾರೇ ಬಂದು ಕೇಳಲಿ ಇಲ್ಲ ಎಂದು ಹೇಳುವುದಕ್ಕಾಗದೆ ಮತ್ತು ದೇಶದಲ್ಲಿ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ತೆರೆಯಬೇಕೆಂಬ ಉದ್ದೇಶದಿಂದ ಸರ್ಕಾರವವರು ಆಸ್ಪತ್ರೆಗಳನ್ನು ತೆರೆದಿದ್ದಾರೆ. ಸರ್ಕಾರಕ್ಕೆ ಆ ಉತ್ಸಾಹ ಏರಲೇ ಬೇಕು.

There are some hospitals without doctors. Quantitative expansion ಗಿಂತ qualitative improvement ಕಡಿಮೆಯಾದರೆ ಅದರಿಂದ ಪ್ರಯೋಜನವಿಲ್ಲವೆಂದು ಈಗ ಸದ್ಯಕ್ಕೆ expansion ಮಾಡತಕ್ಕ ನೀತಿಯನ್ನು ಕಡಿಮೆ ಮಾಡಿದ್ದೇವೆ.

Sri M. GOVINDA REDDY.—Are the Government convinced that in order to attract more doctors they should revise their scales of pay ?

Mr. SPEAKER.—The Hon'ble Member is not asking for information. He is only making a suggestion.

Sri M. GOVINDA REDDY.—I am asking whether the Government are considering, in view of the shortage of doctors, the possibility of raising their scales of pay.

ಶ್ರೀ ಟಿ ಸಿದ್ದಲಿಂಗಯ್ಯನವರು.—ಅದು ಸರ್ಕಾರದ ಪರ ಪರ್ಯಾಲೋಚನೆಯಲ್ಲಿರತಕ್ಕ ವಿಚಾರ.

Sri M. GOVINDA REDDY.—Is it not true that every year in the cities and towns in the State, doctors are opening dispensaries on their own account ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ನಿಜ.

Sri M. GOVINDA REDDY.—Is it not desirable to check the opening of such dispensaries when there is a shortage of doctors for Government institutions ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅವರುಗಳ ಮೇಲೆಲ್ಲಾ ಸರ್ಕಾರದವರು ಅಧಿಕಾರಗಳನ್ನಿಟ್ಟುಕೊಂಡು ನೀವು ಹೀಗೇ ಹೋಗಬೇಕೆಂದು ಹೇಳುವುದಕ್ಕಾಗುವುದಿಲ್ಲ. ಇದು ಕಷ್ಟ. They have got the freedom to practise or to join service.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—31 ಆಸ್ಪತ್ರೆಗಳು ಡಾಕ್ಟರಿಲ್ಲದೆ ಖಾಲಿ ಇವೆಯೆಂದು ಹೇಳಿದ್ದೀರಿ. ಇವು ಯಾವ ಯಾವ ಡಿಸ್ಪ್ರಿಕ್ಟ್‌ನಲ್ಲಿ ಎಷ್ಟೆಷ್ಟಿವೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದನ್ನು ಹೇಳಿದರೆ ಒಂದು ನೊಡ್ಡ ಪಟ್ಟಿಯಾಗುತ್ತೆ. ಆದರೂ, ಹೇಳುತ್ತೇನೆ.

(1) ಆರು ತಿಂಗಳಿನಿಂದಲೂ ಡಾಕ್ಟರುಗಳಿಲ್ಲದಿರುವ ಸ್ಥಳಗಳು—

ತುಮಕೂರು ಡಿಸ್ಟ್ರಿಕ್ಟ್‌ನಲ್ಲಿ—ಹಾಗಲವಾಡಿ.

ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ—ಹನಗೂರು, ಕಾಗಲವಾಡಿ ಹೀಗೆ ಮೂರು ಸ್ಥಳಗಳು.

ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ—ಕೂಲಾಂಬಿ.

(2) ವರ್ಷದಿಂದಲೂ ಡಾಕ್ಟರುಗಳಿಲ್ಲದ ಸ್ಥಳಗಳೆಂದರೆ :

ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ—ವೇಮಗಲ್ಲು, ತಾಯಲೂರು ಮತ್ತು ಬೀಚೆಗಾನ ಹಳ್ಳಿ.

ಮಂಡ್ಯ ಡಿಸ್ಟ್ರಿಕ್ಟ್‌ನಲ್ಲಿ—ಚಿನ್ನಕುರಳಿ.

ಹಾಸನ ಡಿಸ್ಟ್ರಿಕ್ಟ್‌ನಲ್ಲಿ—ಮಲ್ಲಿಕ್‌ಪಟ್ಟಣ, ಪೊಸಳೆ ಹೊಸಳ್ಳಿ.

ತುಮಕೂರು ಡಿಸ್ಪೆನ್ಸರಿಯಲ್ಲಿ—ಉರುಡಗೆರೆ
ಚಿತ್ರದುರ್ಗ ಡಿಸ್ಪೆನ್ಸರಿಯಲ್ಲಿ—8 ಸ್ಥಳಗಳಲ್ಲಿಲ್ಲ.

(3) ಎರಡು ವರ್ಷಕ್ಕಿಂತಲೂ ಹಿಂದಿನಿಂದ ಡಾಕ್ಟರು ಗಳಿಲ್ಲದಿರುವ ಸ್ಥಳಗಳೆಂದರೆ :—
ಕೋಲಾರ ಡಿಸ್ಪೆನ್ಸರಿಯಲ್ಲಿ—ಚಾಕವೇಲು
ಬೆಂಗಳೂರು ಡಿಸ್ಪೆನ್ಸರಿಯಲ್ಲಿ—ದೊಡ್ಡಹಾಲಳ್ಳಿ
ಮಂಡ್ಯ ಡಿಸ್ಪೆನ್ಸರಿಯಲ್ಲಿ—ಚೀಣ್ಯ
ಹಾಸನ ಡಿಸ್ಪೆನ್ಸರಿಯಲ್ಲಿ—ಬೈಲಹಳ್ಳಿ
ಚಿಕ್ಕಮಗಳೂರು ಡಿಸ್ಪೆನ್ಸರಿಯಲ್ಲಿ—ಯಗಚಿ.
ತುಮಕೂರು ಡಿಸ್ಪೆನ್ಸರಿಯಲ್ಲಿ—ಹನಕೆರೆ.
ಶಿವಮೊಗ್ಗ ಡಿಸ್ಪೆನ್ಸರಿಯಲ್ಲಿ—ಕರೂರು.
ಚಿತ್ರದುರ್ಗ ಡಿಸ್ಪೆನ್ಸರಿಯಲ್ಲಿ—ನಾರುಗೋಡು.
ಶ್ರೀರಾಮಪುರ, ಹಿರೆಯೂರು.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಈ 31 ಸ್ಥಾನಗಳನ್ನು ಭರ್ತಿಮಾಡುವುದಕ್ಕೆ ಎಷ್ಟು ಕಾಲ ಬೇಕಾಗಬಹುದು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ಕಾರಣಗಳನ್ನು ನಾನಾಗಲೇ ಹೇಳಿದ್ದೇನೆ. ಆ ಕಷ್ಟಗಳನ್ನು ಪರಿಹಾರ ಮಾಡಬೇಕೆಂದು ಸಾಕಷ್ಟು ಸಂಖ್ಯೆಯಲ್ಲಿ ಡಾಕ್ಟರುಗಳನ್ನು ಆಕರ್ಷಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಇನ್ನೊಂದು ವಿಷಯ ಹೇಳುವುದಾದರೆ, ಇದಕ್ಕೆ ನೇಮಕ ಮಾಡಿಕೊಳ್ಳುವುದರಲ್ಲಿ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಇರುವ ಅಪ್ತಿಗಳನ್ನೂ ತಾತ್ಕಾಲಿಕವಾಗಿ ತೆಗೆದಿದೆ.

Sri H. M. CHANNABASAPPA.—My question is, what is the length of time that Government require to provide these hospitals with doctors ?

Sri T. SIDDALINGIAH.—As long as a sufficient number is not coming forward.

Sri H. M. CHANNABASAPPA.—Are the Government aware that this is an essential service ?

Sri T. SIDDALINGIAH.—Quite so.

Sri H. M. CHANNABASAPPA. Have the Government ever thought of commandeering the services of the people of this profession ?

Sri T. SIDDALINGIAH.—There is no law, I think, to commandeer the services of any person.

Sri H. M. CHANNABASAPPA.—Have the Government ever thought of filling up these thirty-one vacancies by withdrawing doctors from bigger hospitals such as Victoria, Vani Vilas and Sri Krishnarajendra Hospitals ?

Sri T. SIDDALINGIAH.—That is begging the question.

Sri H. M. CHANNABASAPPA.—Have the Government ever thought of at least replacing such hospitals where doctors are not forthcoming by improved ayurvedic dispensaries ?

Sri T. SIDDALINGIAH.—I thank the Hon'ble Member Sri Channabasappa for the suggestion. I think it is being done in the district of Mysore which he represents.

Sri H. M. CHANNABASAPPA.—Will the Government extend the same benefits that are given to other dispensaries in case improved ayurvedic dispensaries are started by local bodies ?

Sri T. SIDDALINGIAH.—That will be considered.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಮೈಸೂರು ಡಿಸ್ಪೆನ್ಸರಿಯಲ್ಲಿರುವ ಕಾಗಲವಾಡಿಯಲ್ಲಿ ಎಷ್ಟು ತಿಂಗಳಿನಿಂದ ಡಾಕ್ಟರಿಲ್ಲ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—For over six months ಎಂದು ಆಗಲೇ ಹೇಳಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಸಬ್ ಅಸಿಸ್ಟೆಂಟ್ ಸರ್ಜನರು ಹತ್ತಿರದಲ್ಲೇ ಇರುವವರಿನ್ನು ಅಲ್ಲಿಗೆ ಕಳುಹಿಸಿಕೊಡುವ ಏರ್ಪಾಡು ಮಾಡಿದೆಯೆಂದು ಹೇಳಿದಿರಿ. ಅವರು ಅಲ್ಲಿಗೆ ಹೋಗಿ ಸರಿಯಾಗಿ ಕೆಲಸಮಾಡುತ್ತಿದ್ದಾರೆಂದು ತಮಗೆ ವರದಿಯಾಗಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೌದು, ಹಾಗೆಂದು ವರದಿ ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಅವರು ಸರಿಯಾಗಿ ಬರುತ್ತಿಲ್ಲವೆಂದೇನೂ ದೂರುಗಳು ಬಂದಿಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನನಗೆ ತಿಳಿದ ಮಟ್ಟಿಗೆ ಬಂದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಅನೇಕ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಗೆ ವಾಸಕ್ಕೆ ಮನೆಯಿಲ್ಲದಿರುವುದರಿಂದ ಡಾಕ್ಟರುಗಳು ಬರದಿರುವುದಕ್ಕೆ ಕಾರಣವಾಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಇಂಥ ತೊಂದರೆಯನ್ನು ಸರಿಪಡಿಸುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೊಸದಾಗಿ ಈಚೆಗೆ ಎಲ್ಲ ಆಸ್ಪತ್ರೆಗಳನ್ನು ಕಟ್ಟಿದ್ದಾರೋ ಅಲ್ಲಯೇ ಹೀಗೆ ಡಾಕ್ಟರುಗಳಿಗೆ ವಸತಿಗೃಹಗಳಿಲ್ಲದೆ ತೊಂದರೆಯಾಗಿರುವುದು. ಹಳೆಯ ಸ್ಥಳಗಳಲ್ಲೇನೂ ಇಂಥ ತೊಂದರೆ ಇಲ್ಲ. ಸ್ಥಳದವರನ್ನೇ ಕೇಳಿ ಅಲ್ಲಿಗೂ ಮಾಡಿಸಿಕೊಡಬೇಕೆಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಆ ಆಸ್ಪತ್ರೆಗಳ ಡೋನರ್‌ಗಳನ್ನೇ ಈ ವಾಸದ ಮನೆಗಳನ್ನೂ ಮಾಡಿಸಿಕೊಡಬೇಕೆಂದು ಕೇಳುತ್ತಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಹಾಗೆಯೇ ಮಾಡುತ್ತಿದ್ದೇವೆ.

ಮುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಮುಸ್ಲಿಂ).—ಹನಗೋಡು ಬದರಕೆರೆ—ಈ ಊರುಗಳಲ್ಲಿ ಎಷ್ಟು ದಿವಸಗಳಿಂದ ಡಾಕ್ಟರುಗಳಿಲ್ಲ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆಗಲೇ ಉತ್ತರ ಹೇಳಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಒಂದು ವರ್ಷದಿಂದ ಇಲ್ಲ ಎಂದು ಹೇಳಿದಿರಿ. ಆಸ್ಪತ್ರೆಗಳು ಶುರುವಾದ ಮೊದಲಿಂದಲೂ ಡಾಕ್ಟರುಗಳಿಲ್ಲದಿರುವ ಸ್ಥಳಗಳೆಷ್ಟು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಎರಡು ವರ್ಷಕ್ಕೆ ಮೇಲ್ಪಟ್ಟ ಕಾಲದಿಂದ ಇಲ್ಲದಿರುವ ಸ್ಥಳಗಳ ವಿಚಾರ ತಮಗೀಗ ತಿಳಿಸಿದ್ದೇನೆ. ಅದಕ್ಕೂ ಮೇಲ್ಪಟ್ಟ ಕಾಲದ ಸ್ಥಳಗಳ ವಿಚಾರ ಈಗ ನಾನು ಹೇಳಲಾರೆ.

ಜನಾಬ್ ಜೆ. ಮಹಮದ್ ಇಮಾಂರವರು.—ಬಿದನ ಕೆರೆಯಲ್ಲಿ ಈಗ್ಗೆ ನಾಲ್ಕು ವರ್ಷದಿಂದಲೂ ಡಾಕ್ಟರೇ ಇಲ್ಲವೆಂಬುದು ಗೊತ್ತಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್ ಬೇಕು.

ಜನಾಬ್ ಜೆ. ಮಹಮದ್ ಇಮಾಂರವರು.—ಕೆಲವು ಆಸ್ಪತ್ರೆಗಳಲ್ಲಿ—ಉದಾಹರಣೆಗೆ ಹಣಜಿ, ಹನಗೋಡು—ಈ ಕಡೆಗಳಲ್ಲಿ ಆಸ್ಪತ್ರೆಗಳನ್ನು ತೆರೆದ ಲಾಗಾಯಿತು ಇಂದಿನವರೆಗೂ ಡಾಕ್ಟರುಗಳೇ ಇಲ್ಲದಿರುವುದು ತಮಗೆ ಗೊತ್ತಿದೆಯೇ ! ಪ್ರಾರಂಭದಲ್ಲಿ ಥೂರೋ ಮಂತ್ರಿಗಳು ಬಂದು ಅದನ್ನು ಪ್ರಾರಂಭಮಾಡಿ ಹೊರಟು ಹೋದ ಫೇಲೆ, ಈಚೆಗೆ ಅಲ್ಲಗೆ ಯಾರೂ ಡಾಕ್ಟರುಗಳೇ ನೇಮಕ ವಾಗದಿರುವುದು.....

Sri K. CHENGALARAYA REDDY—(Leader of the House).—Sir, is the Hon'ble Member making a statement or putting a supplementary question ?

Mr. SPEAKER.—The Hon'ble Member is making a statement which he should not. He should put only supplementary questions.

ಜನಾಬ್ ಜೆ. ಮಹಮದ್ ಇಮಾಂರವರು.—ಆಸ್ಪತ್ರೆ ಹುಟ್ಟಿದ ಲಾಗಾಯಿತು ಡಾಕ್ಟರುಗಳೇ ಇಲ್ಲದಿರುವ ಸ್ಥಳಗಳು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಂಥಾದ್ದು ಯಾವುದೂ ನನ್ನ ಗಮನಕ್ಕೆ ಬಂದಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಸಿರಿಗೆರೆಯಲ್ಲಿ ಎಷ್ಟು ದಿವಸಗಳಿಂದ ಡಾಕ್ಟರಿಲ್ಲ!

Sri T. SIDDALINGIAH.—For more than a year as already stated.

ಜನಾಬ್ ಜೆ. ಮಹಮದ್ ಇಮಾಂರವರು.—ಸಿರಿಗೆರೆಯಲ್ಲಿ ಹೈಸ್ಕೂಲಿದ್ದು ಅದು ನೂರಾರು ಜನ ವಾಸ ಮಾಡುತ್ತಿರುವ ಊರೆಂಬುದು ತಮ್ಮ ಗಮನಕ್ಕೆ ಬಂದಿದೆಯೇ!

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿದೆ. If there is anything within my sphere that should be done and if it is brought to my notice, I will see that it is attended to immediately.

ಜನಾಬ್ ಜೆ. ಮಹಮದ್ ಇಮಾಂರವರು.—ಸಾಧ್ಯವಾದಷ್ಟು ಬೇಗ ಅಲ್ಲಗೆ ಒಬ್ಬರು ಡಾಕ್ಟರನ್ನು ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ!

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಾಡುತ್ತೇನೆ

ಶ್ರೀ ಶಿವಾನಂದ ಶರ್ಮಾರವರು (ಬೆಂಗಳೂರು ಜಿಲ್ಲೆ).—ಯಳಂದೂರು ತಾಲ್ಲೂಕಿನಲ್ಲಿ ಮುಖ್ಯ ಮಂತ್ರಿಗಳೇ ಬಂದು ಒಂದು ಆಸ್ಪತ್ರೆಯನ್ನು ಪ್ರಾರಂಭಮಾಡಿದರು. ಆ ಆಸ್ಪತ್ರೆಗೆ ಇಂದಿನವರೆಗೂ ಡಾಕ್ಟರನ್ನು ಕಳುಹಿಸಿದ್ದೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್ ಬೇಕು.

ಶ್ರೀ ಶಿವಾನಂದ ಶರ್ಮಾರವರು.—ಇಷ್ಟು ಜನ ಡಾಕ್ಟರುಗಳು ನಮ್ಮಲ್ಲಿ ತರಬೇತಾಗುತ್ತಿದ್ದರೂ ಏಕೆ ಡಾಕ್ಟರುಗಳೇ ಬರುತ್ತಿಲ್ಲವೆಂದು ಹೇಳುತ್ತೀರಿ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕಾರಣವನ್ನು ಆಗಲೇ ಹೇಳಿದ್ದೇನೆ.

ಶ್ರೀ ಶಿವಾನಂದ ಶರ್ಮಾರವರು.—ಕೆಲವು ಕಡೆ ಡಾಕ್ಟರುಗಳಿದ್ದರೂ ಸರಿಯಾದ ಉಪಕರಣಗಳೇ ಇಲ್ಲದೆ ತೊಂದರೆಯಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ

Mr. SPEAKER.—That question does not arise.

Janab MOHAMED VALIULLA (Kolar-Muslim).—The Government were pleased to tell us that at Srirampur, there was no doctor for the last two years. . . . . .

Sri T. SIDDALINGIAH.—Which Srirampur ?

Janab MOHAMED VALIULLA.—Srirampur near Sidlaghatta in Kolar District. When there was no doctor at that place for the last two years, why did they not make arrangements for a doctor from the adjoining place where a medical man was available, to visit the dispensary at Srirampur ?

Sri T. SIDDALINGIAH.—I think such arrangements have been made and are being made.

ಶ್ರೀ ಎ. ಜಿ. ಬಂಡೀಗೌಡರು (ಮಂಡ್ಯ ಜಿಲ್ಲೆ).—31 ಜನ ಡಾಕ್ಟರುಗಳಿಲ್ಲವೆಂದು ಹೇಳಿದ್ದೀರಿ. ಅದರಲ್ಲಿ ಲೇಡಿ ಡಾಕ್ಟರುಗಳೆಷ್ಟು ಜನ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—31 ಆಸ್ಪತ್ರೆಗಳು ಇಲ್ಲ ಎಂದು ಮಾತ್ರ ಹೇಳಿದೆ.

ಶ್ರೀ ಎ. ಜಿ. ಬಂಡೀಗೌಡರು.—ಫ್ರೆಂಚ್‌ರಾಕ್ಸ್ ತಾಲ್ಲೂಕು ಕ್ಯಾತನಹಳ್ಳಿ ಹೆಂಗಸರ ಆಸ್ಪತ್ರೆಯಲ್ಲಿ ಲೇಡಿ ಡಾಕ್ಟರಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಚೆಗೆ ಕೊಟ್ಟಿದೆ. ಡಾಕ್ಟರು ಹೋಗಿದ್ದಾರೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ಮ ಪಂಗಡ).—31 ಆಸ್ಪತ್ರೆಗಳಲ್ಲಿ ಡಾಕ್ಟರಿಲ್ಲವೆಂದು ಹೇಳಿದ್ದೀರಿ. ಅವು ಗ್ರಾಮಾಂತರ ಪ್ರದೇಶಗಳಲ್ಲಿವೆಯೋ ಅಥವಾ ಅರ್ಬನ್ ಪ್ರದೇಶಗಳಲ್ಲಿವೆಯೋ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಹೆಚ್ಚಾಗಿ ಗ್ರಾಮಾಂತರ ಪ್ರದೇಶಗಳಲ್ಲೆಂದು ಹೇಳಬಹುದು.

ಶ್ರೀ ಟಿ. ಹನುಮಯ್ಯನವರು.—ಪಟ್ಟಣವಾಸಗಳಲ್ಲಿರುವ ಆಸ್ಪತ್ರೆಗಳಿಗೂ ಡಾಕ್ಟರುಗಳಿಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ವಿಚಾರ ಮಾಡಬೇಕು.

ಶ್ರೀ ಟಿ. ಹನುಮಯ್ಯನವರು.—ಹಳ್ಳಿಗಾಡುಗಳಲ್ಲಿರುವ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದೇ ಇದ್ದು ಪಟ್ಟಣಗಳ ಆಸ್ಪತ್ರೆಗಳಲ್ಲಿ ಡಾಕ್ಟರುಗಳಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಎಲ್ಲರಿಗೂ ವಿಶದವಾಗಿ ತಿಳಿದೇ ಇದೆ. ಹೊರಗಡೆಯಿಂದ ಡಾಕ್ಟರುಗಳು ಹಳ್ಳಿಗಳಿಗೆ ಹೋಗಿ ವಾಸಮಾಡುವುದಕ್ಕೆ ಆಕರ್ಷಣೆ ಮತ್ತು ಉತ್ಸಾಹ ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಡಾಕ್ಟರುಗಳು ಬಹಳ ಕಡಿಮೆಯೆಂದು ಹೇಳುತ್ತೀರಿ. ಹಾಗಾದರೆ ರಿಟೈರ್ ಆದವರಿಗೆ ಎಕ್ಸ್‌ಟೆಂಷನ್ ಕೊಡುವುದಕ್ಕೆ ಪ್ರಯತ್ನ ಮಾಡಿದ್ದೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಆಲೋಚನೆಯಲ್ಲಿದೆ.

ಶ್ರೀ ಟಿ. ಹನುಮಯ್ಯನವರು.—ಎಕ್ಸ್‌ಟೆಂಷನ್ ಬೇಕೆಂದು ಎಷ್ಟು ಜನ ಡಾಕ್ಟರುಗಳು ಕೇಳಿದ್ದಾರೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವರು ಕೇಳಿದ್ದಾರೆ. ಇಷ್ಟೇ ಎಂದು ಹೇಳುವುದಕ್ಕೆ ನೋಟೀಸ್ ಬೇಕು.

ಶ್ರೀ ಟಿ. ಹನುಮಯ್ಯನವರು.—ಹಾಲಿ ಎಷ್ಟು ಜನರಿಗೆ ಕೊಟ್ಟಿದ್ದೀರಿ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಹನುಮಯ್ಯನವರು.—ಎಷ್ಟು ಜನಕ್ಕೆ ನಿರಾಕರಿಸಿದ್ದೀರಿ?

ಅಧ್ಯಕ್ಷರು.—ಎಕ್ಸ್‌ಟೆಂಷನ್ ಕೊಡುವ ವಿಷಯವನ್ನು ಈಗ ಕೇಳುವುದು ಸರಿಯಲ್ಲ.

ಶ್ರೀ ಟಿ. ಹನುಮಯ್ಯನವರು.—ಚಿತ್ರದುರ್ಗ ಜಿಲ್ಲೆಯಲ್ಲಿ ಒಂದೆರಡು ವರ್ಷಗಳಾದರೂ ಹೆಚ್ಚು ಆಸ್ಪತ್ರೆಗಳಿಗೆ ಡಾಕ್ಟರುಗಳನ್ನು ಕೊಟ್ಟಿಲ್ಲದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—ತಂಪು ಅಲ್ಲಿ ಕಡಿಮೆಯೆಂದು ಕಾಣುತ್ತದೆ. ಅದು ಡ್ರೈ ಡಿಸ್ಟ್ರಿಕ್ಟು.

ಶ್ರೀ ಟಿ. ಹನುಮಯ್ಯನವರು.—ಅದಕ್ಕೆ ಜಾಗ್ರತೆ ವ್ಯವಸ್ಥೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಖಂಡಿತ ಮಾಡುತ್ತೇವೆ.

Sri D. H. CHANDRASEKHARAIYA (Chitaldrug District—General).—Is it not a fact that it has been recently ordered that every one who receives medical education should render compulsory service for a certain number of years after he obtains diploma or decree as the case may be?

Sri T. SIDDALINGIAH.—Yes.

Sri D. H. CHANDRASEKHARAIYA.—Will this not help us to get over the difficulty of finding doctors to work in vacancies in the dispensaries?

Sri T. SIDDALINGIAH.—Yes.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ತುಮಕೂರು ಜಿಲ್ಲೆಯಲ್ಲಿ 9 ತಾಲ್ಲೂಕುಗಳಲ್ಲಿ ಡಾಕ್ಟರುಗಳಿಲ್ಲ, ಅಲ್ಲವೆ, ತಿರುವಣಿ, ಕೊಡಿಗೇನಹಳ್ಳಿ,—ಈ ಗ್ರಾಮಗಳಲ್ಲಿ ಎರಡು ವರ್ಷದಿಂದ ಡಾಕ್ಟರುಗಳಿದ್ದಾರೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮೂರು ಕಡೆ ಇಲ್ಲವೆಂದು ಹೇಳಿದ್ದೇನೆ. ಮಿಕ್ಕ ವಿಚಾರ ಗಮನಕ್ಕೆ ಬಂದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಆಸ್ಪತ್ರೆ ಪ್ರಾರಂಭವಾಗಿ 2 ವರ್ಷವಾದರೂ ಡಾಕ್ಟರಿಲ್ಲ. ಬರೀ ಕಾಂಪೌಂಡರು ಮಾತ್ರ ಇದ್ದಾರೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ.

ಶ್ರೀ ಬಿ. ಹುಚ್ಚೇಗೌಡರು.—ಎಷ್ಟು ದಿವಸಗಳಿಂದ ಆ ಸ್ಥಳಗಳಲ್ಲಿ ಡಾಕ್ಟರು ಇಲ್ಲ?

Sri T. SIDDALINGIAH.—For over six months and less than one year.

ಶ್ರೀ ಬಿ. ಹುಚ್ಚೇಗೌಡರು.—ಕೊಡಗೇನಹಳ್ಳಿಯಲ್ಲ?

Sri T. SIDDALINGIAH.—For over one year and under two years.

ಶ್ರೀ ಬಿ. ಹುಚ್ಚೇಗೌಡರು.—ತಿರುವಣಿಯಲ್ಲ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಆ ಸಮಾಚಾರ ಈಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಉರುಡುಗೆರೆಯಲ್ಲ?

Sri T. SIDDALINGIAH.—Ove one year and under two years

ಶ್ರೀ ಬಿ. ಹುಚ್ಚೇಗೌಡರು.—ಈ ಆಸ್ಪತ್ರೆಗಳಿಗೆ ಈಗ ಆಯುರ್ವೇದ ಪಂಡಿತರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಒಳ್ಳೆಯ ಸಲಹೆ. ಯೋಚನೆ ಮಾಡಬಹುದು.

Sri A. BHEEMAPPA NAIK (Chitaldrug District—General).—Is the Government Order *re*: fixing communal proportions for appointments also responsible to some extent for the dearth of doctors?

Sri T. SIDDALINGIAH.—Yes, to some extent.

Sri A. BHEEMAPPA NAIK.—Will the Government be pleased to remove that communal proportion?

Sri T. SIDDALINGIAH.—It has been done.

Sri A. BHEEMAPPA NAIK.—Were any hospitals or dispensaries opened six months back, one year back or two years back all over the State?

Sri T. SIDDALINGIAH.—Yes.

Sri A. BHEEMAPPA NAIK.—Why did the Government think of starting new dispensaries when the old dispensaries themselves could not be provided with doctors? Was it not unwise on their part to have done so?

Sri T. SIDDALINGIAH.—The intention of the Government, I think, may be understood.

Sri A. BHEEMAPPA NAIK.—When a new dispensary is started, is it not a fact that some doctor in some district dispensary is sent there and sent back as soon as the Minister who opens the hospital or dispensary returns?

Mr. SPEAKER.—That does not arise.

Sri A. BHEEMAPPA NAIK.—How many dispensaries are there in rural areas with minimum instruments and medicines?

Mr. SPEAKER.—That question also does not arise out of this question.

Sri M. MUNISWAMY (Kolar District—Depressed Class).—Has there not been a representation for opening a dispensary in the Nandydroog Mines in Kolar Gold Field?

Sri T. SIDDALINGIAH.—Notice.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಚಾಲ್ತಿಸಾಲಿನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಆಸ್ಪತ್ರೆಗಳು ಮತ್ತು ಲೋಕಲ್ ಫಂಡ್ ಡಿಸ್ಪೆನ್ಸರಿಗಳೆಷ್ಟು ಮತ್ತು ಅವುಗಳ ಹೆಸರೇನು?

ಶ್ರೀ ಟಿ. ಸಿದ್ದಲಿಂಗಯ್ಯನವರು.—19.

Sri M. MADIAH.—Were the hospitals opened with the doctors?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಜನರಲ್ ಆಗಿ ಇದುವರೆಗೆ ಅವು ಯಾವುವೆಂಬುದನ್ನು ಹೇಳಿದೆ.

Sri M. MADIAH.—What is the number of dispensaries newly sanctioned in the Mysore District?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ—ನಿಮ್ನ ಪಂಗಡ).—ಡಾಕ್ಟರುಗಳನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗವಾಡುವ ಹಾಗೆ ಖಾಲಿ ಇರುವ ಜಾಗಕ್ಕೆ ಏಕೆ ವರ್ಗಾಯಿಸಬಾರದು?

ಅಧ್ಯಕ್ಷರು.—ಹಾಗೆ ಮಾಡಿದರೆ ಇನ್ನೊಂದು ಜಾಗವು ಪುನಃ ಖಾಲಿ ಬೀಳುವುದಿಲ್ಲವೇ?

ಶ್ರೀ ಎಂ. ಎಲ್. ನಂಜರಾಜಅರಸಿನವರು (ಮೈಸೂರು ಜಿಲ್ಲೆ).—470 ಆಸ್ಪತ್ರೆಗಳು ಇವೆಯೆಂದು ಹೇಳಿದ್ದೀರಿ. ಅವುಗಳಿಗೆ ಸರಿಯಾಗಿ ಔಷಧಿಗಳು ಸರಬರಾಯಾಗುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಕೆಲವು ಕಡೆ ಆ ರೀತಿಯಾಗಿರಬಹುದು.

ಶ್ರೀ ಎಂ. ಎಲ್. ನಂಜರಾಜಅರಸಿನವರು.—ಆ ರೀತಿ ಇರುವುದು ತಮ್ಮ ಗಮನಕ್ಕೆ ಬಂದರೆ ತಕ್ಷಣ ಸರಿಯಾದ ಏರ್ಪಾಡು ಮಾಡುತ್ತೀರಾ?

Sri T. SIDDALINGIAH.—Certainly.

Sri T. SUBRAMANYA (Tumkur District-General).—When there is dearth for allopathic doctors, do the Government intend using the services of Homeopathic doctors who are readily available?

Sri T. SIDDALINGIAH.—It will be considered.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸರ್ಕಾರಿ ಡಾಕ್ಟರುಗಳು ಪ್ರೈವೇಟ್ ಪ್ರಾಕ್ಟಿಸ್ ಮಾಡಲು ಏನಾದರೂ ಪ್ರತಿಬಂಧಕವಿದೆಯೇ?

Mr. SPEAKER.—That does not arise out of this question.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ).—ಮೈಸೂರು ತಾಲ್ಲೂಕು ಕಡಕೊಳ ಗ್ರಾಮಕ್ಕೆ ಎರಡು ಮೂರು ವರ್ಷಗಳಹಿಂದೆ ಆಸ್ಪತ್ರೆ ಮಂಜೂರಾಗಿದ್ದರೂ ಇದುವರೆಗೆ ಡಾಕ್ಟರನ್ನು ಕೊಟ್ಟಿಲ್ಲ, ಅದನ್ನು ಬೇಗ ಕೊಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).—ಸರ್ಕಾರದವರು ಕಲ್ಕತ್ತಾಕ್ಕೆ ಶಿಕ್ಷಣಪಡೆದುಕೊಂಡು ಬರಲು ಒಬ್ಬ ಡಾಕ್ಟರನ್ನು ಕಳುಹಿಸಿ ಅವರು ಅದನ್ನು ಮುಗಿಸಿಕೊಂಡು ವಾಪಸ್ಸು ಬಂದಿದ್ದರೂ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇಯಿರುವುದು ಗೊತ್ತೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಇಲ್ಲ.

ಶ್ರೀ ಟಿ. ರಾಮಾಚಾರ್ಯರು.—ಹಾಗೆ ಯಾರನ್ನಾದರೂ ಹೊರಕ್ಕೆ ಕಳುಹಿಸಿ ಅವರು ಬಂದ ಮೇಲೆ ಪುನಃ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳದೇ ಯಿರುವುದು ಗಮನಕ್ಕೆ ಬಂದಿಲ್ಲವೆ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನನ್ನ ಗಮನಕ್ಕೆ ಬಂದಿಲ್ಲ.

Sri H. C. LINGA REDDY (Kolar District—General).—Sir, is it the policy of the Government to start one L. F. Hospital for each hobli?

Sri T. SIDDALINGIAH.—That does not arise out of this question.

Sri H. C. LINGA REDDY.—Are any arrangements made for the treatment of patients in hospitals where there are no doctors?

Sri T. SIDDALINGAIAH.—Yes.

Sri H. C. LINGA REDDY.—Do the Government consider that some more medical colleges and medical schools are necessary to cope with the demand for medical men?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅಂಥಾದ್ದಕ್ಕೆ ಅವಶ್ಯಕತೆ ಕಂಡು ಬಂದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಸ್ಪತ್ರೆಗಳಿದ್ದು ತಕ್ಕಷ್ಟು ಔಷಧಿಗಳಿಲ್ಲದೇ ಯಿರುವುದು ಗೊತ್ತಿದೆಯೇ?

Mr. SPEAKER.—That does not arise out of this question.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಯ ಹೋಬಳಿ ಬಾಲಗೆರೆಯಲ್ಲಿ ಕಂಬ್ಯೌಂಡ್‌ಡಿಸ್ಪೆನ್ಸರಿಯನ್ನು ಏರ್ಪಾಡುಮಾಡಬೇಕೆಂದು ಬಂದಿರುವ ನಲಹೆ ನ್ಯಾಯವೆಂದು ಅದನ್ನು ಜಾರಿ ಕೊಡಲು ಯೋಚನೆ ಮಾಡುತ್ತೀರಾ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ನಮಗೆ ಗೊತ್ತಾಗಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ಅಲ್ಲಿ ಇಂತಹ ಒಂದು ಆಸ್ಪತ್ರೆ ಮತ್ತು ಎಂಟು ಹತ್ತು ಜನರಾದರೂ ಇರಲು ಜಾಗ್ರೆಗಳು ಇಲ್ಲದೇ ಇರುವುದರಿಂದ ಜನರು ಬಹಳ ಕಷ್ಟನಷ್ಟಗಳನ್ನನುಭವಿಸುತ್ತಿದ್ದಾರೆ. ಆದಕಾರಣ ಅಲ್ಲಿಗೆ ಒಂದು ಕಂಬ್ಯೌಂಡ್‌ಡಿಸ್ಪೆನ್ಸರಿ ಕೊಡುವುದು ಅವಶ್ಯಕವಲ್ಲವೇ?

ಅಧ್ಯಕ್ಷರು.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಲ್ಲಿ ಆಸ್ಪತ್ರೆಯಿದೆ, ಅಲ್ಲಿಗೆ ಡಾಕ್ಟರು ಮತ್ತು ಲೇಡಿಡಾಕ್ಟರುಗಳು ಬೇಕೆಂದು ನಾವು ಕೇಳುವುದು.

ಶ್ರೀ ಟಿ. ಸಿದ್ದಲಿಂಗಯ್ಯನವರು.—ಈ ವಿಷಯ official ಆಗಿ ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಅಲ್ಲಿಗೆ ಈ ರೀತಿ ಮಾಡುವುದು ಅವಶ್ಯಕವೆಂಬುದು ಗೊತ್ತಿದೆಯೇ ?

Sri. T. SIDDALINGIAH.—It is a question of opinion.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ಅಲ್ಲಿ ಕಾಮಗಾರಿ ನಡೆಸಲು ಬಂದಿರತಕ್ಕ ಜನರಲ್ಲಿ ಕೈಕಾಲು ಮುರಿದುಹೋಗಿ ತೊಂದರೆಪಡತಕ್ಕವರಿಗೆ ಸರಿಯಾದ ವೈದ್ಯಸಹಾಯವಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿಲ್ಲ, ಬಂದಿದ್ದರೆ ತಕ್ಕ ಏರ್ಪಾಡುಮಾಡಬಹುದಾಗಿತ್ತು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.-ಅಂತಹ ಸ್ಥಳದಲ್ಲಿ ವೈದ್ಯ ಸಹಾಯ ಇರಬೇಕಾದುದು ಅವಶ್ಯಕವಲ್ಲವೆ ?

Sri T. SIDDALINGIAH.—It is a matter of opinion.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗೆ ಜಿಲ್ಲೆ).—ಮಲೆನಾಡಿನಲ್ಲಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ಮತ್ತು ಡಾಕ್ಟರುಗಳಿಲ್ಲದಿರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ನೋಟೀಸ್.

ಶ್ರೀ ಕಡಿದಾಳ್‌ಮಂಜಪ್ಪನವರು.—ಪಟ್ಟಣಗಳಲ್ಲಿರುವ ಡಾಕ್ಟರುಗಳನ್ನು ಹಳ್ಳಿಗಳಿಗೆ ವರ್ಗವಾಡಿದರೆ ಅಲ್ಲಿಗೆ ಹೋಗುವುದಿಲ್ಲವೆಂದು ಅವರು ಹೇಳುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಸರ್ಕಾರಿ ಅಧಿಕಾರಗಳಲ್ಲಿರುವವರು ಹೀಗೆ ಹಠ ಹಿಡಿದಿರುವುದು ನಮ್ಮ ಗಮನಕ್ಕೆ ಬಂದಿಲ್ಲ. ಹೊಸ ಹುದ್ದೆಗಳಿಗೆ ನೇಮಿಸಿದರೆ ಹೋಗಲು ಜನರು ಮುಂದೆ ಬಂದಿಲ್ಲ.

ಶ್ರೀ ಜಿ. ನಾರಾಯಣಗೌಡರು (ಕೋಲಾರ ಜಿಲ್ಲೆ).—ಹಳ್ಳಿಗಳಲ್ಲಿ ಡಾಕ್ಟರುಗಳಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ಜನರು ಮುಂದೆ ಬಂದರೆ ಅಲ್ಲಿಗೆ ತಕ್ಕ ಸಹಾಯ ಕೊಡಲು ಸರ್ಕಾರದವರು ತಯಾರಾಗಿದ್ದಾರೆಯೇ ?

Mr. SPEAKER.—That does not arise out of this question ?

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ—ನಿಮ್ನ ಪಂಗಡ).—ಹಾಸನ ಜಿಲ್ಲೆಯ ಬೈಲಹಳ್ಳಿಯ ಆಸ್ಪತ್ರೆಯಲ್ಲಿ ಎಷ್ಟು ವರ್ಷಗಳಿಂದ ಡಾಕ್ಟರಿಲ್ಲ ?

Sri T. SIDDALINGIAH.—For over two years,

ಶ್ರೀ ಗೋವಿಂದದಾಸ್‌ರವರು.—ಡಾಕ್ಟರನ್ನು ಅಲ್ಲಿಗೆ ಕಳುಹಿಸಬೇಕೆಂದು ಜನರಿಂದ ಅರ್ಜಿಗಳು ಬಂದಿಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಬಂದಿರಬಹುದು.

ಶ್ರೀ ಗೋವಿಂದದಾಸ್‌ರವರು.—ಮಲೆನಾಡಿನಲ್ಲಿ ಮಲೇರಿಯಾ ಹಾವಳಿ ಹೆಚ್ಚೆಂಬುದನ್ನು ಒಪ್ಪುತ್ತೀರಾ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದು ಗೊತ್ತಿರುವ ವಿಷಯ.

ಶ್ರೀ ಗೋವಿಂದದಾಸ್‌ರವರು.—ಅದೂ ಮಲೆನಾಡಿನಲ್ಲಿಲ್ಲವೆ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಮಲೆನಾಡಿನಲ್ಲಿದೆ ಎಂಬುದು ಗೊತ್ತಿದೆ.

Sri K. CHENGALARAYA REDDY.—I submit, Sir, that this question has been enough "supplementaried" if I may use that word.

ಶ್ರೀ ಗೋವಿಂದದಾಸ್‌ರವರು.—ಮಲೆನಾಡಿನಲ್ಲಿ ಆಸ್ಪತ್ರೆಗಳನ್ನು ಕೊಟ್ಟು ಡಾಕ್ಟರುಗಳನ್ನು ಕಳುಹಿಸದೇ ತೊಂದರೆಯಾಗಿರುವುದರಿಂದ ಬೇಗ ಡಾಕ್ಟರುಗಳನ್ನು ಕಳುಹಿಸುವುದು ಸೂಕ್ತವಲ್ಲವೇ ?

ಶ್ರೀ ಟಿ. ಸಿದ್ದಲಿಂಗಯ್ಯನವರು.—ಅದಷ್ಟು ಮಾಡುತ್ತಿದ್ದೇವೆ.

Mr. SPEAKER.—Next question, Question 127 Mr. T. Ramachar.

Janab SYED ABDUR RAHMAN (Chikmagalur *cum* Shimoga--Muslim).—On a point of order, Sir. When a question is put and the concerned Minister is not there, that question is retained. But when the member is absent, that is passed over.

Mr. SPEAKER.—That is provided for in the Rules. Hon'ble Member will please read the rules.

Janab SYED ABDUR RAHMAN.—Will the Chair kindly take up my question Sir ?

Mr. SPEAKER.—Will the Hon'ble Member kindly read the rules first ?

Delay in granting pensions to Non-Gazetted Officers.

*Q.—127. **Sri T. RAMACHAR** (Kolar District--General).—

Will the Government be pleased to state :—

(*a*) the number of non-gazetted officers who retired during the years 1947-48, 1948-49 and 1949-50 and the dates of their retirement ;

(*b*) the number of persons who have not been able to draw their pensions and the period during which they could not do so ;

(*c*) the number of pension papers pending in the Comptrollers's Office and since how long they have been so pending ;